ತೊಡಗಿಕೊಳ್ಳಬೇಕಿರುವ ಹೊಸ ತಲೆಮಾರಿಗೆ ಬೇಕಾದ ಆಹಾರ ಮತ್ತು ಇತರೆ ಅವಶ್ಯಕತೆಗಳಲ್ಲಿ ತಾವೂ ಭಾಗ ಪಡೆದು, ಕೆಲವೊಮ್ಮೆ ಅವರೊಂದಿಗೆ ಸ್ಪರ್ಧಿಸಿ, ಆ ತಲೆಮಾರಿನ ಆರೋಗ್ಯಕರ ಬೆಳವಣಿಗೆಗೆ ಅಡ್ಡಿಯಾಗುತ್ತವೆ. ಇದರಿಂದಾಗಿ ತಮ್ಮದೇ ವಂಶದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಬದಲಿಗೆ ಪುನರಾಭಿವೃದ್ಧಿಯ ಜವಾಬ್ದಾರಿ ಮುಗಿದಂತೆ ಜೀವಬಿಡುವ ಪ್ರಭೇದಗಳ ವಂಶ ಉನ್ನತವಾಗಿ ಬೆಳೆಯುವುದನ್ನು ನಿರೀಕ್ಷಿಸಬಹುದು. ಹಾಗಾಗಿ ಪುನರಾಭಿವೃದ್ಧಿ ಮುಗಿದ ತಕ್ಷಣವೇ ತಮ್ಮ ಜೀವನವನ್ನು ಕೊನೆಗಾಣಿಸುವ ಗುಣ ಎಲ್ಲ ಜೀವಿಗಳಲ್ಲಿ ಅಂತರ್ಗತವಾಗಿರಬೇಕು. ಇದು ನಿಜವೆ?

ವಿಚಿತ್ರವೆಂದರೆ ಜೀವ ಪ್ರಪಂಚದಲ್ಲಿ ಇದನ್ನು ಸಮರ್ಥಿಸುವಂತಹ ಎಷ್ಟೋ ಉದಾಹರಣೆಗಳಿವೆ. ಅಣಬೆಯ ಪ್ರಭೇದಗಳು ಪುನರಾಭಿವೃದ್ಧಿಯ ಅಂಗವಾದ ಕೊಡೆಯನ್ನು ಬಿರಿದು, ಅದರ ಮೂಲಕ ಮುಂದಿನ ಜನಾಂಗದ 'ತೃಣ ಬೀಜ'ಗಳನ್ನು ಪಸರಿಸಿದ ಮರುಕ್ಷಣವೇ ಒಣಗಿ ತಮ್ಮ ಜೀವನ ಮುಗಿಸುತ್ತವೆ. ರಾಗಿ, ಜೋಳ, ಅವರೆ, ಹುರುಳಿ, ಮೆಕ್ಕೆಜೋಳ ಮುಂತಾದ ಸಸ್ಯಗಳು ಕೂಡ ತೆನೆ ಅಥವ ಬೀಜಗಳನ್ನು ಬಿರಿದಮೇಲೆ ಇಡಿಯಾಗಿ ಒಣಗಿ ಸಾಯುತ್ತವೆ (ಕೆಲವೊಮ್ಮೆ ಅವುಗಳ ಬೇರುಗಳಿಂದ ಮರುಬೆಳೆ ಬರುವ ಸಾಧ್ಯತೆ ಇದೆಯಾದರೂ ಸಾಮಾನ್ಯವಾಗಿ ವಾರ್ಷಿಕ ಬೆಳೆಗಳೆಲ್ಲವೂ ಪುನರಾಭಿವೃದ್ಧಿಯ ನಂತರ ಸಾಯುತ್ತವೆ.)

ಪ್ರತಿ ವಸಂತದಲ್ಲೂ ಪುನರಾವರ್ತಿತವಾಗಿ ಹೂಬಿಡುವ ಮರಗಳ ಪ್ರಭೇದಗಳೂ ಕೊನೆಗೊಮ್ಮೆ ತಮ್ಮ ಇಡೀ ದೇಹವನ್ನು ಪುನರಾಭಿವೃದ್ಧಿಗೆ ತೊಡಗಿಸಿಕೊಂಡು ಕ್ಷೀಣಗೊಂಡಮೇಲೆ ಸಾಯುತ್ತವೆ. 'ಅಫಿಡ್' ಎಂಬ ಕೀಟದಲ್ಲಿ ಎರಡು ರೀತಿಯ ಜೀವನಕ್ರಮಗಳಿವೆ. ಒಂದು ಕ್ರಮದಲ್ಲಿ ತಾಯಿ ಕೀಟವು ತನ್ನ ದೇಹದೊಳಗೆ ನೂರಾರು ಹೆಣ್ಣು ಮರಿಗಳನ್ನು ಬಿರಿಯುತ್ತದೆ. ಅವೆಲ್ಲವೂ ತಾಯಿಯ ಹೊಟ್ಟೆಯಲ್ಲಿಯೇ ಬೆಳೆದು ಕೊನೆಗೆ ತಾಯಿಯ ದೇಹವನ್ನೇ ಹರಿದು, ಹೊರಬರುತ್ತವೆ; ಮಕ್ಕಳಿಗೆ ಜನ್ಮ ಕೊಟ್ಟ ಆ ತಾಯಿ ಕೀಟವು ತಾಯ್ತನದ ಕರ್ತವ್ಯ ಮುಗಿಯಿತೆಂದು ತನ್ನನ್ನು ಇಡಿಯಾಗಿ ತ್ಯಾಗ ಮಾಡುತ್ತದೆ. ಹಾಗೆ ತಾಯಿಯ ಬಸಿರನ್ನೇ ಹರಿದು ಹುಟ್ಟಿದ ಆ ಹೆಣ್ಣುಮಕ್ಕಳೂ ಅಷ್ಟೆ. ತಾವು ಬೆಳೆದು, ತಮ್ಮೊಳಗೆ ಮತ್ತೆ ನೂರಾರು ಹೆಣ್ಣುಮರಿಗಳನ್ನು ಬಿರಿದು ಆ ಮರಿಗಳೂ ಹೊರಬರುತ್ತಿದ್ದಂತೆ ತಾವೂ ಸಾಯುತ್ತವೆ. ಹುಟ್ಟಿ, ಬೆಳೆದು, ಪುನರಾಭಿವೃದ್ಧಿ ಮಾಡಿ ಸಾಯುವ ಅಫಿಡ್‌ಗಳ ಈ ಜೀವನವೃತ್ತಾಂತವು ಸತತವಾಗಿ ಹೀಗೆಯೇ ಮುಂದುವರಿಯುತ್ತದೆ.

ಇವೆಲ್ಲಕ್ಕೂ ಮಿಗಿಲಾದ ಉದಾಹರಣೆ ಎಂದರೆ, ಆಲದ ಮರ ಮತ್ತು ಅರಳಿ ಮರದ ಜಾತಿಯ ಪ್ರಭೇದಗಳಲ್ಲಿ ಪರಾಗಕ್ರಿಯೆ ನಡೆಸುವ ಕಣಜಗಳ ಜೀವನಕ್ರಮ. ಪರಾಗರೇಣುಗಳನ್ನು ಹೊತ್ತ ಹೆಣ್ಣು ಕಣಜವು ಆಲದ ಮರದ 'ಹುಸಿ–ಕಾಯಿ'ಗಳ ಒಳಗೆ ಹೊಕ್ಕು, ಅಲ್ಲಿನ ಹೂವುಗಳ ಮೇಲೆ ಪರಾಗ ರೇಣುಗಳನ್ನು ಸಿಂಪಡಿಸಿ, ಪರಾಗ ಕ್ರಿಯೆ ಮಾಡಿ, ತನ್ನ ಮೊಟ್ಟೆಗಳನ್ನೂ ಅಲ್ಲಿಯೇ ಇಡುತ್ತದೆ. ಆ ಮೊಟ್ಟೆಗಳಿಂದ ಹೊರಬರುವ ಹುಳುಗಳು ಅತ್ತಿ ಕಾಯಿಯ ಒಳಗೇ ಬೆಳೆದು ಕಣಜಗಳಾಗುತ್ತವೆ. ಹಾಗೆ ಬೆಳೆದ ನೂರಾರು ಕಣಜಗಳಲ್ಲಿ ಬಹುಪಾಲು ಎಲ್ಲವೂ ಹೆಣ್ಣು ಕಣಜಗಳೇ ಆಗಿದ್ದು, ಒಂದೂ ಎರಡೋ (ಕೆಲವೊಮ್ಮೆ ಐದತ್ತು) ಮಾತ್ರವೇ ಗಂಡು ಕಣಜಗಳಾಗಿರುತ್ತವೆ. ಈ ಗಂಡು ಕಣಜಗಳ ಜೀವನದ ಏಕೈಕ ಕರ್ತವ್ಯ ಎಂದರೆ ಆ ಎಲ್ಲ ಹೆಣ್ಣು ಕಣಜಗಳಿಗೆ (ಅಂದರೆ ತಮ್ಮ ಸಹೋದರಿಯರಿಗೆ) ವೀರ್ಯದಾನ ಮಾಡುವುದು. ಅಷ್ಟೆ! ಎಲ್ಲ ಹೆಣ್ಣು ಕಣಜಗಳ ಜೊತೆ ಸಂಭೋಗ ನಡೆಸಿದ ಮರುಕ್ಷಣವೆ ಆ ಗಂಡು ಕಣಜಗಳು ತಾವು ಅಷ್ಟಕ್ಕಾಗಿ ಮಾತ್ರವೆ ಹುಟ್ಟಿದ್ದೆವು ಎನ್ನುವಂತೆ, ಅಲ್ಲಿಯೆ, ಅತ್ತಿ ಹಣ್ಣಿನ ಒಳಗಿನ ಕತ್ತಲ ಲೋಕದಲ್ಲಿಯೆ ಸತ್ತುಹೋಗುತ್ತವೆ. ಹಾಗಾಗಿ ಈ ಗಂಡು ಕಣಜಗಳ ಇಡೀ ಸಂತತಿಗೆ ಎಂದೂ ಹೊರಗಿನ ಪ್ರಪಂಚದ ಪರಿಚಯವೇ ಇರುವುದಿಲ್ಲ! ತಮ್ಮ ಸಂಭೋಗಕ್ರಿಯೆ ಅಂದರೆ ಪುನರಾಭಿವೃದ್ಧಿಯಲ್ಲಿನ ತಮ್ಮ ಕರ್ತವ್ಯ ಮುಗಿದ ತಕ್ಷಣವೇ ಅವು ಸತ್ತುಹೋಗುತ್ತವೆ. ಆದರೆ ತಮ್ಮ ಕರ್ತವ್ಯವನ್ನು ಇನ್ನೂ ಮುಗಿಸದ ಹೆಣ್ಣು ಕಣಜಗಳು ಅತ್ತಿ ಹಣ್ಣಿನಿಂದ ಪರಾಗರೇಣುಗಳನ್ನು ಹೊತ್ತು ಹೊರಬಂದು, ಮತ್ತೊಂದು 'ಹುಸಿ–ಕಾಯಿ'ಯನ್ನು ಹುಡುಕಿ ಹೊರಡುತ್ತವೆ; ಅಲ್ಲಿ ಪರಾಗಕ್ರಿಯೆ ಮಾಡಿ, ತಮ್ಮ ಮೊಟ್ಟೆಗಳನ್ನಿಡಲು. ಮೊಟ್ಟೆಗಳನ್ನಿಟ್ಟ ಕೆಲವೇ ಗಂಟೆಗಳಲ್ಲಿ ಅವೂ ಸಾಯುತ್ತವೆ. ಹೀಗೆ ಪುನರಾಭಿವೃದ್ಧಿಯಾದ ನಂತರ, ಬದುಕುವ ಬದಲು ಸಾಯಲು ಸಿದ್ಧವಿರುವ (ಅಥವ ಸಾವು ಸಿದ್ಧಿಸುವ) ಸಾವಿರಾರು ಉದಾಹರಣೆಗಳನ್ನು ಜೀವ ಪ್ರಪಂಚದಲ್ಲಿ ಕಾಣಬಹುದು.

ಹಾಗೆ ನೋಡಿದರೆ ವಿಕಾಸದ ಆದಿಯಲ್ಲಿ ಸಾವು ಇರಲೇ ಇಲ್ಲ. ವಿಕಾಸದ ಆರಂಭದ ಪ್ರಭೇದಗಳೆನ್ನಬಹುದಾದ ಬ್ಯಾಕ್ಟೀರಿಯ ಅಥವ ಅಮೀಬಾದಂಥಹ ಜೀವಿಗಳಲ್ಲಿ ಮೂಲತಃ ಪುನರಾಭಿವೃದ್ಧಿ ಕ್ರಿಯೆಯು ಒಂದೇ ಜೀವಕೋಶವು ಎರಡಾಗಿ ವಿಭಜನೆಗೊಳ್ಳುವ ಕ್ರಮದಲ್ಲಿ ನಡೆಯುತ್ತದೆ. ಇದರಿಂದಾಗಿ, ತಾಯಿಕೋಶದ ಜೀವವು ಎರಡು ಮರಿ ಕೋಶಗಳಿಗೆ ಹರಿದು ಸಾಗುತ್ತದೆ. ತಾಯಿಕೋಶದಿಂದ ಮರಿಕೋಶಗಳಿಗೆ ನಿರಂತರವಾಗಿ ಜೀವ ಹರಿದುಹೋಗುವುದರಿಂದ ಅಲ್ಲಿ ಸಾವಿನ ಪರಿಕಲ್ಪನೆಯನ್ನು ಕಾಣಲಾಗದು. ಆದರೆ **Pseudoamoeba** ಎಂಬ ಪ್ರಭೇದದಲ್ಲಿ ಸಾವಿನ ಛಾಯೆಯನ್ನು ಕಾಣಬಹುದು. ಈ ಪ್ರಭೇದದಲ್ಲಿ ವಿಭಜನೆಗೊಳ್ಳುತ್ತಿರುವ ಕೋಶಗಳಿಗೆ ಆಹಾರದ ಕೊರತೆ ಉಂಟಾದಾಗ, ತಾವಿರುವ ಸ್ಥಳದಿಂದ ಆಹಾರ ಸಿಗಬಹುದಾದ





ತಾಯಿಯ ಒಡಲನ್ನೆ ಬಗೆದು ಬರುವ ಮರಿ ಅಫಿಡ್‌ಗಳು